ಉತ್ತರಪತ್ರಿಕೆಯ
ಮರುಮೌಲ್ಯಮಾಪನಕ್ಕಾಗಿ ಅರ್ಜಿ

ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03

## ಆಗಸ್ಟ್–2019ರ ಗಣಕಯಂತ್ರ ಶಿಕ್ಷಣ ಪರೀಕ್ಷೆಯ ಉತ್ತರಪತ್ರಿಕೆಯ ಮರುಮೌಲ್ಯಮಾಪನಕ್ಕಾಗಿ ಅರ್ಜಿ

(ಅರ್ಜಿಯನ್ನು ತುಂಬುವ ಮೊದಲು ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ)

(ಉತ್ತರಪತ್ರಿಕೆ ಛಾಯಾಪ್ರತಿ ಪಡೆದವರು ಮಾತ್ರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು)

| | |
|---|---|
| 1. | ವಿದ್ಯಾರ್ಥಿಯ ಹೆಸರು ಮತ್ತು ವಾಸಸ್ಥಳದ ಪೂರ್ಣ ವಿಳಾಸ<br>(ಪಿನ್ ಕೋಡ್ ಕಡ್ಡಾಯ)<br>ಮೊಬೈಲ್ ದೂರವಾಣಿ ಸಂಖ್ಯೆ & ಇ–ಮೇಲ್ ವಿಳಾಸ: |
| 2. | ವಿದ್ಯಾರ್ಥಿಯ ನೊಂದಣಿ ಸಂಖ್ಯೆ |
| 3. | ವಿದ್ಯಾರ್ಥಿಯು ವ್ಯಾಸಂಗ ಮಾಡಿದ ಸಂಸ್ಥೆಯ ಸಂಕೇತ,<br>ಹೆಸರು ಮತ್ತು ವಿಳಾಸ |
| 4. | ಪರೀಕ್ಷಾ ಕೇಂದ್ರದ ಸಂಕೇತ |
| 5. | ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ವಿಷಯಗಳು |

| ಕ್ರ. ಸಂ | ವಿಷಯ | ವಿಷಯ ಸಂಕೇತ ಸಂಖ್ಯೆ | ಗಳಿಸಿದ ಅಂಕಗಳು |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

6\.

ಪಾವತಿಸಿದ ಶುಲ್ಕ ಮೊತ್ತ ರೂ. ---------ಅಕ್ಷರಗಳಲ್ಲಿ----------------------------------------------

ಬ್ಯಾಂಕ್ NEFT ಚಲನ್ ಸಂಖ್ಯೆ --------------ದಿನಾಂಕ---------ಬ್ಯಾಂಕಿನ ಹೆಸರು-------------------

ಮೇಲೆ ನೀಡಿರುವ ಮಾಹಿತಿಗಳು ಸರಿಯಾಗಿವೆ ಹಾಗೂ ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಓದಿ ಮನದಟ್ಟು ಮಾಡಿಕೊಂಡು ಅದಕ್ಕೆ ಬದ್ಧನಾಗಿರುತ್ತೇನೆ ಎಂದು ದೃಢೀಕರಿಸುತ್ತೇನೆ.

ವಿದ್ಯಾರ್ಥಿಯ/ ಪೋಷಕರ ಸಹಿ

ದಿನಾಂಕ:

ಮೇಲೆ ನೀಡಿರುವ ವಿವರಗಳು ಸರಿಯಾಗಿವೆ ಎಂದು ದೃಢೀಕರಿಸಿದೆ.

ದಿನಾಂಕ: ಶಾಲಾ ಮುಖ್ಯಸ್ಥರ ಸಹಿ (ಶಾಲಾ ಮೊಹರಿನೊಂದಿಗೆ)

# <u>ಸೂಚನೆಗಳು</u>

1. ಛಾಯಾಪ್ರತಿ ಪಡೆದವರು ಮಾತ್ರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.
2. ಮರುಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ವಿದ್ಯಾರ್ಥಿ/ಪೋಷಕರ ಸಹಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆಯ ಮೂಲಕವಾಗಲಿ ಕಳುಹಿಸಬಹುದು. ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ **<u>ಶಾಖಾಧಿಕಾರಿಗಳು, ಗಣಕಯಂತ್ರ ಶಿಕ್ಷಣ ಪರೀಕ್ಷೆಗಳು, ನಾಲ್ಕನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.</u>**
3. ಭರ್ತಿ ಮಾಡಿರುವ ಅರ್ಜಿಯ ಲಕೋಟೆಯ ಮೇಲೆ **<u>ಗಣಕಯಂತ್ರ ಶಿಕ್ಷಣ ವಿಷಯಗಳ</u>** ಮರುಮೌಲ್ಯಮಾಪನಕ್ಕೆ ಅರ್ಜಿ ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಬೇಕು.
4. ಪ್ರತಿ ಅರ್ಜಿಯ ಜೊತೆ ಮರುಮೌಲ್ಯಮಾಪನಕ್ಕಾಗಿ ನಿಗಧಿ ಪಡಿಸಿರುವ ಶುಲ್ಕ ಒಂದು ವಿಷಯಕ್ಕೆ **<u>ರೂ.700/–ಗಳನ್ನು</u>** ಇತರೆ ಪರೀಕ್ಷಾ ವಿಭಾಗದ NEFT ಚಲನ್ ಮೂಲಕ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಿ ಮೂಲ ಚಲನ್ ಲಗತ್ತಿಸಬೇಕು.
5. ಛಾಯಾಪ್ರತಿಯನ್ನು ಪಡೆದಂತಹ ವಿದ್ಯಾರ್ಥಿಗಳು ಛಾಯಾಪ್ರತಿ ತಲುಪಿದ 07 ದಿನಗಳೊಳಗಾಗಿ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬೇಕು. ಅಪೂರ್ಣ ಅರ್ಜಿಯನ್ನು ಮತ್ತು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಶುಲ್ಕವನ್ನು ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಅನುತ್ತೀರ್ಣ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ ಫಲಿತಾಂಶಕ್ಕೆ ಕಾಯದೆ ತಮ್ಮ ಮುಂದಿನ ಪರೀಕ್ಷೆಗೆ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸಬೇಕು. ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸದಿದ್ದಲ್ಲಿ ವಿದ್ಯಾರ್ಥಿಯೇ ಜವಾಬ್ದಾರರಾಗಿರುತ್ತಾರೆ.
7. ಪರೀಕ್ಷೆ ಅವ್ಯವಹಾರದಲ್ಲಿ ತೊಡಗಿದಂತಹ ಹಾಗೂ ಫಲಿತಾಂಶ ತಡೆ ಹಿಡಿದಿರುವಂತಹ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
8. ಅರ್ಜಿಯೊಂದಿಗೆ ವಿದ್ಯಾರ್ಥಿಯ ಪ್ರಸಕ್ತ ಸಾಲಿನ ಪರೀಕ್ಷೆಯ ಪ್ರವೇಶ ಪತ್ರದ ಛಾಯಾ ಪ್ರತಿಯನ್ನು ಮತ್ತು ಮಂಡಳಿಯಿಂದ ಪಡೆದ ಸಂಬಂಧಿಸಿದ ವಿಷಯದ ಉತ್ತರ ಪತ್ರಿಕೆಯ ಛಾಯಾಪ್ರತಿಯ ಮುಖಪುಟದ ನಕಲನ್ನು ತಪ್ಪದೇ ಲಗತ್ತಿಸಬೇಕು.
9. ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10. ಮರುಮೌಲ್ಯಮಾಪನದಲ್ಲಿ ಅಂಕಗಳು ಪ್ರತಿ ವಿಷಯಕ್ಕೆ 10 ಅಥವಾ 10ಕ್ಕಿಂತ ಹೆಚ್ಚಾದಲ್ಲಿ ಮಾತ್ರ ಮರುಮೌಲ್ಯಮಾಪನದ ಶುಲ್ಕವನ್ನು ಹಿಂದಿರುಗಿಸಲಾಗುವುದು.
11. ಮರುಮೌಲ್ಯಮಾಪನ ಫಲಿತಾಂಶದ ನಂತರ ಮರು ಪರಿಶೀಲನೆಗಾಗಲೀ ಅಥವಾ ಮೇಲ್ಮನವಿಗಾಗಲೀ ಅವಕಾಶ ಇರುವುದಿಲ್ಲ.
12. ಮರುಮೌಲ್ಯಮಾಪನದಲ್ಲಿ ಅಂಕಗಳು ಹೆಚ್ಚಾದರೆ ಅಂಕಗಳು ಸೇರಿಸಿ ಫಲಿತಾಂಶ ನೀಡಲಾಗುವುದು ಹಾಗೂ 06 ಮತ್ತು 06ಕ್ಕಿಂತ ಹೆಚ್ಚು ಅಂಕಗಳು ಕಡಿಮೆಯಾದ ಪಕ್ಷದಲ್ಲಿ ಅಂಕಗಳನ್ನು ಕಡಿಮೆಗೊಳಿಸಿ ಫಲಿತಾಂಶ ನೀಡಲಾಗುವುದು.
13. ಮರುಮೌಲ್ಯಮಾಪನದಲ್ಲಿ ಅಂಕಗಳು ಬದಲಾವಣೆಯಾದಲ್ಲಿ ಮೂಲ ಅಂಕಪಟ್ಟಿಯನ್ನು ಮಂಡಳಿಗೆ 15 ದಿನಗಳೊಳಗಾಗಿ ಸಲ್ಲಿಸಿ ಪರಿಷ್ಕೃತ ಅಂಕಪಟ್ಟಿಯನ್ನು ಪಡೆಯುವುದು.
14. ಛಾಯಾಪ್ರತಿ ಪಡೆದ ನಂತರ ಮುಖ ಪುಟದಲ್ಲಿನ ಅಂಕಗಳು ಕೂಡುವಿಕೆಯಲ್ಲಿಯೇ ತಪ್ಪಾಗಿರುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸದೇ ಮಂಡಳಿಯನ್ನು ಸಂಪರ್ಕಿಸಿ ಕೂಡುವಿಕೆಯನ್ನು ಸರಿಪಡಿಸಿಕೊಳ್ಳಲು ಅವಕಾಶವಿದೆ.

ಸಹಿ/–
ನಿರ್ದೇಶಕರು
(ಇತರೆ ಪರೀಕ್ಷೆಗಳು)